ದಿನಾಂಕಃ 03.12.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಅಬ್ದುಲ್ ಖಾದರ್ ರವರ ಹೆಂಡತಿಯ ಹೆಸರು ಮಹಬೂಬಿ. ಅಬ್ದುಲ್ ಖಾದರ್ ರವರಿಗೆ 6 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಮೊದಲನೆಯ ಮಗನ ಹೆಸರು ಷರೀಫ್ ಎಂದು, ನ್ಯಾಯಾಲಯದಲ್ಲಿ ಕುಳಿತ್ತಿದ್ದ ಮತ್ತೊಬ್ಬ ವಾದಿ ಶೇಕ್ ರಶೀದ್ ಎಂದು ಉಚ್ಚರಿಸಿದ್ದು ನಂತರ ಸಾಕ್ಷಿ ಶೇಕ್ ರಶೀದ್ ಎಂದು ನುಡಿಯುತ್ತಾರೆ. ಅವರು ಈಗ ಜೀವಂತ ಇಲ್ಲ. ಅವರ ಹೆಂಡತಿಯ ಹೆಸರು ಗೊತ್ತಿಲ್ಲ. ಅಬ್ದುಲ್ ರಶೀದ್ ಗೆ 6 ಜನ ಗಂಡು ಮಕ್ಕಳು. ಮೊದಲನೆಯವರ ಹೆಸರು ನೆನಪಿಗೆ ಬರುತ್ತಿಲ್ಲ, ಮುಂದುವರೆದು ಸಾಕ್ಷಿ ಅವರ ಹೆಸರು ಮಹಮ್ಮದ್ ಪಾಷು ಎನ್ನುತ್ತಾರೆ. 2 ನೇಯವರ ಹೆಸರು ಅಬ್ದುಲ್ ವಾಜೀದ್, 3 ನೇಯವರ ಹೆಸರು ಅಬ್ದುಲ್ ಜಲೀಲ್, 4 ನೇಯವರು ಅಬ್ದುಲ್ ಜಮೀಲ್, ಅಬ್ದುಲ್ ಖಾದರ್ ರವರ 2 ನೇ ಮಗನ ಹೆಸರು ಅಬ್ದುಲ್ ಷೇಕ್ ದಾವೂದ್ ಉರುಫ್ ಚೋಟು ಸಾಬ್ ಆಗಿರುತ್ತದೆ. ಅವರ ಹೆಂಡತಿಯ ಹೆಸರು ಶಾಫಿಯಾ. ಶೇಕ್ ದಾವೂದ್‌ಗೆ ಮೂರು ಜನ ಗಂಡು ಮಕ್ಕಳು, 5 ಜನ ಹೆಣ್ಣು ಮಕ್ಕಳು. ಅಬ್ದುಲ್ ರಹೀಂ ಸಾಬ್ ಶೇಕ್ ದಾವೂದ್ ರವರ ಮೊದಲನೆ ಮಗ ಎಂದರೆ ಸರಿ. 2 ನೇ ಮಗಳು ಜಮ್ರಾದ್ ಎಂದರೆ ಸರಿ. 3 ನೇಯವರ ಹೆಸರು ನೆನಪಿಲ್ಲ. ಅವರ ಹೆಸರು ಜರೀನ್ ತಾಜ್ ಎಂದರೆ ಸರಿ. 4 ನೇಯವರ ಹೆಸರು ಜಬೀನ್ ತಾಜ್, ಶಾಹೀನ್ ತಾಜ್ ಅಲ್ಲ. 5 ನೇಯವರ ಹೆರು ಅಕ್ಬರ್. 6 ನೇಯವರ ಹೆಸರು ನೆನಪಿಲ್ಲ.

2. ಶೇಕ್ ದಾವೂದ್ ಗೆ ಒಟ್ಟು 9 ಜನ ಮಕ್ಕಳು ಎಂದರೆ ಸರಿ. ಅಬ್ದುಲ್ ರಹೀಂ, ಜಮ್ರಾತ್, ಜರೀನ್ ತಾಜ್, ಶಾಹೀನ್, ಜಬೀನ್ ತಾಜ್, ಅಕ್ಬರ್ ಪಾಷ್, ಅಜ್ಗರ್ ಪಾಷ್, ನಹೀಂ, ಫಹೀಮ. ಈ ದಾವೆಯಲ್ಲಿ ಶೇಕ್ ದಾವೂದ್ ರವರ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅಬ್ದುಲ್ ಖಾದರ್ ರವರ 3 ನೇ ಮಗನ ಹೆಸರು ಉಮ್ಮರ್ ಸಾಹೇಬ್. ಅವರು ಈಗ

ಮೃತಪಟ್ಟಿದ್ದಾರೆ. ಉಮ್ಮರ್ ಸಾಹೇಬ್ ರವರಿಗೆ ಮೂರು ಜನ ಗಂಡು ಮಕ್ಕಳು, ಮೂರು ಜನ ಹೆಣ್ಣು ಮಕ್ಕಳು. ಅವರ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಅಬ್ದುಲ್ ಖಾದರ್ ರವರ 4 ನೇ ಮಗನ ಹೆಸರು ಅಬ್ದುಲ್ ಜಬ್ಬರ್ ಸಾಹೇಬ್. ಅವರಿಗೆ ಮೂರು ಜನ ಹೆಂಡತಿಯರು, 9 ಜನ ಮಕ್ಕಳು. ಅವರ ಮೊದಲನೆ ಹೆಂಡತಿಯ ಹೆಸರು ನೆನಪಿಲ್ಲ. ಮೊದಲನೆ ಹೆಂಡತಿಗೆ ಇಬ್ಬರು ಮಕ್ಕಳು. ಅವರ ಮೊದಲನೆ ಮಗನ ಹೆಸರು ಬಾಬು. 2 ನೇ ಮಗನ ಹೆಸರು ಸಾಬುಲಾಲ್ ಮೃತಪಟ್ಟಿದ್ದಾರೆ. ಸಾಬುಲಾಲ್ ಹೆಂಡತಿ ಮಕ್ಕಳು ಇದ್ದಾರೆ. ಅವರ ಹೆಂಡತಿ ಬೇರೆಯವರನ್ನು ಮದುವೆಯಾಗಿದ್ದಾರೆ. ಮಕ್ಕಳು ಅವರ ತಾಯಿಯ ಜೊತೆಯಲ್ಲಿ ಈಗ ಇರುವ ಗಂಡನ ಜೊತೆ ಇದ್ದಾರೆ.

3. ಸಾಬುಲಾಲ್‌ಗೆ ಮೂರು ಜನ ಮಕ್ಕಳು. ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಜಬ್ಬರ್ ಸಾಹೇಬ್‌ರವರ 2 ನೇ ಹೆಂಡತಿಯ ಹೆಸರು ನೆನಪಿಲ್ಲ. ಅವರು ಮೃತಪಟ್ಟಿದ್ದಾರೆ. ಅವರಿಗೆ 6 ಜನ ಮಕ್ಕಳು ಇದ್ದಾರೆ. ಅವರನ್ನೆಲ್ಲಾ ಪಾರ್ಟಿ ಮಾಡಿದ್ದೇನೆ. 3 ನೇ ಹೆಂಡತಿಯ ಹೆಸರು ನಸ್ರೀನ್ ತಾಜ್. ಅವರಿಗೆ ಒಬ್ಬನೆ ಮಗ, ಆತ ಮೃತಪಟ್ಟಿದ್ದಾನೆ. ಅಬ್ದುಲ್ ಖಾದರ್ ರವರ 5 ನೇ ಮಗಳ ಹೆಸರು ನೂರ್ ಜಾನ್ ಬೇಗಂ ಅಗಿದ್ದು ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. 6 ನೇ ಮಗಳ ಹೆಸರು ರಜಿಯಾ ಆಗಿದ್ದು ಅವರು ಮೃತಪಟ್ಟಿದ್ದಾರೆ. ಅವರಿಗೆ ಹೆಣ್ಣು ಮಕ್ಕಳು ಮಾತ್ರ ಇದ್ದಾರೆ ಅವರನ್ನು ಪಾರ್ಟಿ ಮಾಡಿಲ್ಲ. 7 ನೇ ಮಗನ ಹೆಸರು ಸತ್ತರ್ ಸಾಬ್. ಅವರು ಮೃತಪಟ್ಟಿದ್ದಾರೆ. ಅವರ ಹೆಂಡತಿ ಮತ್ತು ಇಬ್ಬರು ಗಂಡುಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ. ಮೂರು ಜನ ಹೆಣ್ಣುಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ಇಬ್ರಾಹಿಂ ಖಾದರ್ ಸಾಬ್ ರವರ ಮಗ ಎಂದರೆ ಸರಿ. ಅವರು ಮದುವೆಯಾಗುವ ಪೂರ್ವದಲ್ಲಿಯೇ ಮೃತಪಟ್ಟಿದ್ದಾರೆ.

4. ನಿಪಿ.9 ನ್ನು ತಯಾರಿಸಲು ನಾವು 20 ಜನ ವಾದಿಗಳು ಸೇರಿ ಮಾಹಿತಿಯನ್ನು ಕೊಟ್ಟಿದ್ದೇವೆ. ಅದರಲ್ಲಿ ಏನು ಸುಳ್ಳು ಮಾಹಿತಿ ಕೊಟ್ಟಿಲ್ಲ. ನನ್ನ ತಂದೆ ಇಲ್ಲ. 18 ವರ್ಷ ಹಿಂದೆ

ಮೃತಪಟ್ಟಿದ್ದಾರೆ. ನನ್ನ ತಂದೆ ಜೀವಂತವಾಗಿ ಇದ್ದ ದಿನದಿಂದ ನಾವು ಶಾಂತಿನಗರದಲ್ಲಿ ವಾಸವಿಲ್ಲ. ಈಗ ನಾನು ಹಂಪಾಪುರದಲ್ಲಿ ವಾಸವಿದ್ದೇನೆ. ನನ್ನ ತಾಯಿ ಗದ್ದಿಗೆಯಲ್ಲಿ ವಾಸ ಇದ್ದಾರೆ. ದಿವಸ ನಾನು ಹೋಗಿ ಬರುತ್ತೇನೆ. ಪಡಿತರಚೀಟಿ, ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ ನನ್ನ ತಾಯಿಗೆ ಗದ್ದಿಗೆ ವಿಳಾಸದಲ್ಲಿ ಇರುತ್ತದೆ. ನಾನು ಹಂಪಾಪುರದಲ್ಲಿ ವಾಸ ಇರುವುದರಿಂದ ಹಂಪಾಪುರದ ವಿಳಾಸದಲ್ಲಿ ಸದರಿ ದಾಖಲೆಗಳು ಇರುತ್ತವೆ. ಶೇಕ್ ಅಬ್ದುಲ್ ರಶೀದ್ ಮೃತಪಟ್ಟು ತುಂಬಾ ವರ್ಷಗಳಾಗಿವೆ. ಅವರು ಜೀವಂತ ಇದ್ದಾಗ ಬಿಳಿಕೆರೆ ಜಮೀನಿನಲ್ಲಿ ಇದ್ದರು. ನಂತರ ಮೈಸೂರಿಗೆ ಹೋಗಿ ಅಲ್ಲಿ ಮೃತಪಟ್ಟಿದ್ದಾರೆ. ಅವರ ಪಡಿತರಚೀಟಿ, ಮತದಾರರ ಗುರುತಿನ ಚೀಟಿ ಎಲ್ಲಾ ಮೈಸೂರಿನ ವಿಳಾಸದಲ್ಲಿ ಇದೆ ಎಂದರೆ ಸರಿ. ಅವರ ಮಕ್ಕಳು ಮೈಸೂರಿನಲ್ಲಿ ವಾಸ ಇದ್ದಾರೆ. ಉಮ್ಮರ್ ಸಾಬ್ ರವರ ಹೆಂಡತಿ ಮಕ್ಕಳು ಬಿಳಿಕೆರೆಯಲ್ಲಿ ಇದ್ದಾರೆ. ಅವರು ಬಿಳಿಕೆರೆಯಲ್ಲಿ ವಾಸಇದ್ದಾರೆ ಎಂದು ದಾಖಲೆ ಕೊಟ್ಟಿದ್ದೇನೆ.

(ಈ ಹಂತದಲ್ಲಿ ನ್ಯಾಯಾಲಯದ ಕಾಲಾವಕಾಶ ಮುಗಿದಿದ್ದು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹುಣಸೂರು.